**ಕರ್ನಾಟಕ ರಾಜ್ಯ ಪೊಲೀಸ್**
**ಕೇಂದ್ರ ವಲಯ, ಬೆಂಗಳೂರು**

**ಪತ್ರಿಕಾ ಪ್ರಕಟಣೆ**

## ಡ್ರಗ್ ಹಣದಿಂದ ಸಂಪಾದಿಸಿದ ಆರೋಪಿ ಅಂಜಯ್‌ಕುಮಾರ್ ಸಿಂಗ್ ನ ಅಕ್ರಮ ಚರ ಮತ್ತು ಸ್ಥಿರ ಆಸ್ತಿಗಳ ಸ್ಥಗಿತಗೊಳಿಸುವ ಆದೇಶ.

ಅಕ್ರಮವಾಗಿ ಗಾಂಜಾ ಮಾರಾಟ ಮಾಡಿ ಬಂದಂತಹ ಹಣದಿಂದ ಅಕ್ರಮವಾಗಿ ಆಸ್ತಿ ಸಂಪಾದಿಸಿದ್ದ ಆರೋಪಿ ಅಂಜಯ್‌ಕುಮಾರ್ ಸಿಂಗ್ ಎಂಬುವವನ ಕುಟುಂಬಕ್ಕೆ ಸೇರಿದ ಆಸ್ತಿಯನ್ನು ಎನ್.ಡಿ.ಪಿ.ಎಸ್. ಕಾಯ್ದೆ 1985 ಅಧ್ಯಾಯ 5ಎ ಹಣಕಾಸು ತನಿಖೆ (Chapter Va of NDPS ACT 1985 Financial Investigation) ಅಡಿಯಲ್ಲಿ ಅಕ್ರಮ ಆಸ್ತಿಗಳ ಸ್ಥಗಿತಗೊಳಿಸುವ ಆದೇಶವನ್ನು (**Order of Freezing/seizing of illegally acquired property**) ಹೊರಡಿಸಿರುತ್ತೆ.

**<u>ಪ್ರಕರಣದ ವಿವರ:</u>** ಆರೋಪಿಯಾದ ಅಂಜಯ್‌ಕುಮಾರ್ ಸಿಂಗ್ ಬಿನ್ ಮೃತ್ಯುಂಜಯ್ ಪ್ರಸಾದ್ ಸಿಂಗ್ @ ತೂನಸಿಂಗ್, 54 ವರ್ಷ ಬಿಹಾರ ರಾಜ್ಯ, ಆರಾದ ಮಸಾದ್ ಗ್ರಾಮದವನಾಗಿರುತ್ತಾನೆ. ಈತ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದು, ಈತನ ವಿರುದ್ದ ತನ್ನ ಊರಾದ ಆರಾದಲ್ಲಿ ಹಾಗೂ ದೆಹಲಿಯಲ್ಲಿ ಪ್ರಕರಣಗಳು ದಾಖಲಾಗಿರುತ್ತವೆ. ಬಿಹಾರ ರಾಜ್ಯದ ಭೋಜ್‌ಪುರ್‌ನ ಮಾನ್ಯ ನ್ಯಾಯಾಲಯದಲ್ಲಿ ಈತನಿಗೆ ಅಕ್ರಮ ಗಾಂಜಾ ಮಾರಾಟಕ್ಕಾಗಿ ಶಿಕ್ಷೆ ವಿಧಿಸಿರುತ್ತದೆ. ಈತ 2016 ರಿಂದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆನೇಕಲ್ ತಾಲ್ಲೂಕಿನ ಬ್ಯಾಗಡದೇನಹಳ್ಳಿಯಲ್ಲಿ ಕುಟುಂಬದೊಂದಿಗೆ ವಾಸವಿದ್ದನು. ಇಲ್ಲಿಯೂ ಸಹ ಈತ ಅಕ್ರಮವಾಗಿ ಗಾಂಜಾ ಮಾರಾಟ ಮಾಡಿ ಹಣ ಸಂಪಾದನೆ ಮಾಡುವ ಕಾನೂನು ಬಾಹಿರ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದನು.

2019ರಲ್ಲಿ ಸೂರ್ಯನಗರ ಪೊಲೀಸರು 822 ಕೆ.ಜಿ. ಮಾದಕ ವಸ್ತುವಾದ ಗಾಂಜಾವನ್ನು ವಶಪಡಿಸಿಕೊಂಡಿದ್ದು, ಇದರ ಪ್ರಮುಖ ಆರೋಪಿ ಅಂಜಯ್‌ಕುಮಾರ್ ಸಿಂಗ್ ಆಗಿರುತ್ತಾನೆ. ಈತ ಈ ಗಾಂಜಾವನ್ನು ಒರಿಸ್ಸಾದ ಶೇಖರ್ ಎಂಬುವವನಿಂದ ತೆಗೆದುಕೊಂಡು, ವಿಶಾಖಪಟ್ಟಣಂದ ವಾಸಿ ಜಾದವ್ @ ಮಟ್ಟಿ ಎಂಬುವವರ ಮುಖಾಂತರ ಬೆಂಗಳೂರಿಗೆ ತಂದು ತನ್ನ ಡ್ರೈವರ್ ಆಂಧ್ರದ ಡೇವಿಡ್ ಮತ್ತು ಅವನ ಸಂಬಂಧಿಕರಾದ ರಾಹುಲ್ ಮತ್ತು ಸ್ಥಳೀಯ ವಾಸಿ ಮುರಳೀಧರ @ ಮುರಳಿ ಮುಖಾಂತರ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಮಾರಾಟ ಮಾಡಿ ಹಣವನ್ನು ಸಂಪಾದಿಸುತ್ತಿದ್ದನು. ಈ ವಿಚಾರವಾಗಿ ಸೂರ್ಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳಾದ ಅಂಜಯ್‌ಕುಮಾರ್ ಸಿಂಗ್, ಜಾಧವ್ @ ಮಟ್ಟಿ, ಶೇಖರ್, ಡೇವಿಡ್, ರಾಹುಲ್, ಮುರಳೀಧರ್ ರವರ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುತ್ತದೆ. ಆರೋಪಿಯಾದ ಅಂಜಯ್‌ಕುಮಾರ್ ಸಿಂಗ್ ಹಾಲಿ ಬಿಹಾರದ ಆರಾ ಗ್ರಾಮದಲ್ಲಿ, ಶೇಖರ್ ಒರಿಸ್ಸಾದಲ್ಲಿ, ಜಾಧವ್ @ ಮಟ್ಟಿ

ವಿಶಾಖಪಟ್ಟಣದಲ್ಲಿ, ಡೇವಿಡ್ ಆಂಧ್ರಪ್ರದೇಶದಲ್ಲಿ, ಮುರಳೀಧರ್, ರಾಹುಲ್‌ಕುಮಾರ್ ಆನೇಕಲ್‌ನ ಬ್ಯಾಗಡದೇನಹಳ್ಳಿಯಲ್ಲಿ ವಾಸವಾಗಿರುತ್ತಾರೆ.

ಆರೋಪಿಯಾದ ಅಂಜಯ್‌ಕುಮಾರ್ ಸಿಂಗ್ ಈ ರೀತಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡಿ ಸಂಪಾದಿಸಿದ ಹಣದಲ್ಲಿ ಸುಮಾರು 4-5 ವರ್ಷದಿಂದ ತನ್ನ ಹೆಂಡತಿ ಶೀಲಾದೇವಿ ಹೆಸರಿನಲ್ಲಿ ಆನೇಕಲ್ ತಾಲ್ಲೂಕಿನ ಬ್ಯಾಗಡದೇನಹಳ್ಳಿಯಲ್ಲಿ

1) ಒಂದು 30x40 ಸೈಟ್,
2) ಎರಡು 60x40 ಸೈಟ್‌ಗಳು,
3) ಸತ್ಕೀರ್ಥಿ ಅಪಾರ್ಟ್‌ಮೆಂಟ್‌ನಲ್ಲಿ ಒಂದು ಪ್ಲಾಟ್,
4) ಒಂದು ಸ್ಕಾರ್ಪಿಯೋ ಕಾರ್,
5) ಜಂಟಿ ಬ್ಯಾಂಕ್ ಅಕೌಂಟ್‌ನಲ್ಲಿದ್ದ ಅಕ್ರಮವಾದ 9 ಲಕ್ಷ 75 ಸಾವಿರ 918 ರೂ. ಸೇರಿದಂತೆ ಇವುಗಳ ಮೌಲ್ಯ 1 ಕೋಟಿ 68 ಲಕ್ಷದ 75 ಸಾವಿರ 918 ರೂಪಾಯಿಗಳಾಗಿರುತ್ತದೆ.

ಬೆಂಗಳೂರು ಜಿಲ್ಲೆಯ ಪೊಲೀಸ್ ಅಧೀಕ್ಷಕರವರಾದ ಶ್ರೀ ಡಾ. ಕೆ. ವಂಶಿಕೃಷ್ಣ, ಐ.ಪಿ.ಎಸ್. ರವರು ಮತ್ತು ಅಪರ ಪೊಲೀಸ್ ಅಧೀಕ್ಷಕರಾದ ಶ್ರೀ ಕೆ. ಲಕ್ಷ್ಮೀಗಣೇಶ ಕೆ.ಎಸ್.ಪಿ.ಎಸ್. ರವರ ಮಾರ್ಗದರ್ಶನದಲ್ಲಿ ಆನೇಕಲ್ ಉಪ-ವಿಭಾಗದ ಆರಕ್ಷಕ ಉಪಾಧೀಕ್ಷಕರವರಾದ ಶ್ರೀ ಮಲ್ಲೇಶ್.ಎಂ ರವರು ಆರೋಪಿಯಾದ ಅಂಜಯ್‌ಕುಮಾರ್ ಸಿಂಗ್ ನ ಅಕ್ರಮವಾಗಿ ಸಂಪಾದಿಸಿದ ಮೇಲ್ಕಂಡ ಆಸ್ತಿಯನ್ನು ಪತ್ತೆ ಹಚ್ಚಿ, ಸದರಿ ಆಸ್ತಿಯನ್ನು ಅಕ್ರಮವಾಗಿ ಮಾದಕ ವಸ್ತುವಾದ ಗಾಂಜಾ ಮಾರಾಟ ಮಾಡಿ ಸಂಪಾದಿಸಿದ ಹಣದಲ್ಲಿ ಖರೀದಿ ಮಾಡಿದ್ದರಿಂದ ಎನ್.ಡಿ.ಪಿ.ಎಸ್. ಕಾಯ್ದೆ 1985 ಅಧ್ಯಾಯ 5ಎ ಅಡಿಯಲ್ಲಿ ಹಣಕಾಸು ವ್ಯವಹಾರ ತನಿಖೆ (**Chapter Va of NDPS ACT 1985 Financial Investigation**) **ಮಾಡಿ ಅಕ್ರಮ ಆಸ್ತಿಗಳ ಸ್ಥಗಿತಗೊಳಸುವ ಆದೇಶವನ್ನು** (**Order of Freezing/seizing of illegally acquired property**) ಹೊರಡಿಸಿರುತ್ತಾರೆ.

ಈ ಆದೇಶದ ಪ್ರಕಾರ ಆರೋಪಿ ಅಂಜಯ್‌ಕುಮಾರ್ ಸಿಂಗ್ ತನ್ನ ಅಕ್ರಮ ಚರ ಮತ್ತು ಸ್ಥಿರ ಆಸ್ತಿಗಳ ಮೇಲೆ ಯಾವುದೇ ವಹಿವಾಟು ನಡೆಸುವಂತಿಲ್ಲ, ವಿಲೇವಾರಿ, ಪರಬಾರೆ, ಭೋಗ್ಯ, ಇನ್ನಿತರೆ ಯಾವುದೇ ಉದ್ದೇಶಕ್ಕೆ ಬಳಸಿಕೊಳ್ಳುವಂತಿಲ್ಲ. ಸದರಿ ಆಸ್ತಿಯು ಇದು ಅಕ್ರಮವೊ ಅಥವಾ ಅಲ್ಲವೊ ಎಂಬುವುದರ ರುಜುವಾತಿನ ಭಾರ ಆರೋಪಿ ಅಂಜಯ್‌ಕುಮಾರ್ ಸಿಂಗ್ ನ ಮೇಲಿರುತ್ತದೆ.

ಮೇಲ್ಕಂಡ ಅಕ್ರಮ ಆಸ್ತಿಗಳ ಬಗ್ಗೆ ಯಾವುದೇ ವಹಿವಾಟು ನಡೆಸದಂತೆ ಮಾಡಿರುವ ಸ್ಥಗಿತಗೊಳಿಸಿರುವ ಆದೇಶವನ್ನು (Order of Freezing/seizing of illegally acquired property) ಜಿಲ್ಲಾ ನೊಂದಣಾಧಿಕಾರಿಗಳು, ಆರ್.ಟಿ.ಓ., ಬ್ಯಾಂಕ್ ಇತ್ಯಾದಿ ಸಂಸ್ಥೆಗಳಿಗೆ ಆದೇಶದ ಪ್ರತಿಯನ್ನು ರವಾನಿಸಿಕೊಂಡಿರುತ್ತೆ.

ಆರೋಪಿಯಾದ ಅಂಜಯ್‌ಕುಮಾರ್ ಸಿಂಗ್ ಮತ್ತಿತರ ವಿರುದ್ಧ ಜಿಗಣಿ ಪೊಲೀಸ್ ಇನ್‌ಸ್ಪೆಕ್ಟರ್ ಶ್ರೀ ಶೇಖರ್ ಬಿ.ಕೆ. ರವರು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಹಾಗೂ ಆರೋಪಿಯ ವಿರುದ್ಧ ಅಕ್ರಮ ಆಸ್ತಿ ಪತ್ತೆ ಹಚ್ಚುವಲ್ಲಿ ಪೊಲೀಸ್ ಉಪಾಧೀಕ್ಷಕರಿಗೆ ಸಹಕರಿಸಿರುತ್ತಾರೆ. ಸಿಬ್ಬಂದಿಯವರಾದ ಶ್ರೀ ಲಕ್ಷ್ಮೀಪತಿ, ಶ್ರೀ ದಿನೇಶ ರವರು ಎಲ್ಲಾ ತನಿಖಾ ಹಂತದಲ್ಲಿ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ.

(ಎಂ. ಚಂದ್ರಶೇಖರ್, ಐ.ಪಿ.ಎಸ್.)
ಪೊಲೀಸ್ ಮಹಾನಿರೀಕ್ಷಕರು,
ಕೇಂದ್ರ ವಲಯ, ಬೆಂಗಳೂರು.